# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/154/13-14

ದಿನಾಂಕ:26-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ಜಿ. ಸಿ. ಚಂಪಾವತಿ ಗಂಡ ದಿ. ಜಿ. ಜೆ. ಚಂದ್ರಶೇಖರ ಬಾಬು, ಬಳ್ಳಾರಿ<br><br>**(ಶ್ರೀ ಸಿ. ಎಂ. ಗುರುಬಸವರಾಜ, ವಕೀಲರು, ಬಳ್ಳಾರಿ)** | (1) ತಹಶೀಲ್ದಾರರು, ಬಳ್ಳಾರಿ<br>(2) ಕಂದಾಯ ನಿರೀಕ್ಷಕರು, ಕೊಳಗಲ್ಲು<br>(3) ಗ್ರಾಮಲೆಕ್ಕಾಧಿಕಾರಿಗಳು, ಕೊಳಗಲ್ಲು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕೊಳಗಲ್ಲು | 804/ಎ/4 | 4.88 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಫಾರಂ 10 ಮತ್ತು ಆಕಾರಬಂದ್ ಪ್ರಕಾರ ಪಹಣಿಯಲ್ಲಿ ನಮೂದಿಸದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 05-11-2013, 12-05-2013, 24-03-2015, 22-04-2016, 27-05-2016, ಮತ್ತು 26-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಕೊಳಗಲ್ಲುಗ್ರಾಮದ ಸ.ನಂ 804ಎ/4 ವಿಸ್ತೀರ್ಣ 4.88 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಜಮೀನಿನ ಹಕ್ಕುದಾರರರಾಗಿದ್ದು, ಪಹಣಿ ಮತ್ತು ಫಾರಂ 10 ರ ಪ್ರಕಾರ ಪಹಣಿಯಲ್ಲಿ ಹಕ್ಕುದಾಖಲಿಸುವಂತೆ ಕೋರಿರುತ್ತಾರೆ, ಈ ಕುರಿತು ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ ಈ ಗಾಗಲೇ ವಾದಿಗಳ ಹೆಸರು ಹಳೇಕೈಬರಹ ಪಹಣಿಗಳಲ್ಲಿ (1987-88 ರಿಂದ 1995-96 ವರಿಗೆ ) ನಮುದುಇದ್ದು ನಂತರದ ಪಹಣಿಗಳಲ್ಲಿ ನಮೂದಾಗಿರುವುದಿಲ್ಲ.

ಮುಂದುವರೆದು ಸದರಿ ಜಮೀನಿನ ಒಟ್ಟು ವಿಸ್ತೀರ್ಣ 16.42 ಎಕರೆ ಜಮೀನುಇದ್ದು, ಮಾರಾಟ ಮಾಡಲಾಗಿ ಅಪೀಲುದಾರರಿಗೆ ಉಳಿದ ಜಮೀನು 4.88 ಎಕರೆ ಎಂದು ತಿಳಿಸಿರುತ್ತಾರೆ, ಹಾಗೂ ಜಮೀನು ಪೋಡಿಯಾಗಿದ್ದು ಆಕಾರ್ ಬಂದ್ ಪ್ರಕಾರ ಪಹಣಿಯಲ್ಲಿ ಮೇಲ್ಮನವಿದಾರರ ಹೆಸರಿಗೆ 4.88 ಎಕರೆ ಜಮೀನಿನ ಹಕ್ಕು ನಮೂದಿಸುವಂತೆ ಈ ನ್ಯಾಯಾಲಯಕ್ಕೆ ಕೋರಿರುತ್ತಾರೆ.

ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ , ಪ್ರಕರಣವು ತಿದ್ದುಪಡಿವ್ಯಾಪ್ತಿಗೆ ಬರುತ್ತಿದ್ದು , ಕಾರಣ ಕೊಳಗಲ್ಲುಗ್ರಾಮದ ಸ.ನಂ 804ಎ/4 ವಿಸ್ತೀರ್ಣ 4.88 ಎಕರೆ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ.

**ಮುಂದಿನ ಪುಟಕ್ಕೆ...**